ದಿನಾಂಕಃ **19.02.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಸಿ.ಎನ್. ವಕೀಲರಿಂದಃ</u>

ಪ್ರತಿವಾದಿ ನನಗೆ ಬಾಲ್ಯದಿಂದಲೂ ಪರಿಚಯಸ್ಥರು ಆಗಿರುತ್ತಾರೆ. ದಾವಾ ಸ್ವತ್ತುಗಳು ಪ್ರತಿವಾದಿಗೆ ಸೇರಿರುತ್ತವೆ ಎಂಬುದಕ್ಕೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತುಗಳು ಪ್ರತಿವಾದಿಯ ಚಿಕ್ಕಮ್ಮರವರಿಗೆ ಸೇರಿರುತ್ತವೆ ನಾನು ಮಾಡಿಸಿಕೊಡುತ್ತೇನೆ ಎಂದು ಹೇಳಿರುತ್ತಾನೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ಕರಾರು ಪತ್ರವಾಗುವ ಎರಡು ದಿನಗಳ ಪೂರ್ವದಲ್ಲಿ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆ ತಂಡೋಟಿ ಗ್ರಾಮದಲ್ಲಿ ಆಗಿರುತ್ತದೆ. ಆಗ ನಾನು, ವಾದಿ, ಪ್ರತಿವಾದಿ ಮತ್ತು ರಂಗರೆಡ್ಡಿ ಹಾಜರಿದ್ದೆವು. ಸದರಿ ಮಾತುಕತೆ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ.

2. ಕರಾರು ಪತ್ರ ಬರೆಯುವಾಗ ದಾವಾ ಸ್ವತ್ತಿಗೆ ಸಂಬಂಧಿಸಿದ ಪ್ರತಿವಾದಿಯ ಚಿಕ್ಕಮ್ಮನ ಹೆಸರಿನಲ್ಲಿ ಇದ್ದ ಪಹಣಿಯನ್ನು ಇಟ್ಟುಕೊಂಡಿದ್ದರು ಆದರೆ ಅವರ ಚಿಕ್ಕಮ್ಮನ ಹೆಸರು ನನಗೆ ನೆನಪಿರುವುದಿಲ್ಲ. ಸರ್ವೆ.ನಂ. 175 ರಲ್ಲಿ 4 ಎಕರೆ 35 ಗುಂಟೆ ಮತ್ತು ಸರ್ವೆ.ನಂ. 178 ರಲ್ಲಿ 1 ಎಕರೆ 34 ಗುಂಟೆ ಜಮೀನಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಕರಾರು ಪತ್ರವನ್ನು ದಿಃ03.12.2015 ರಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ ಕಾರಾರು ಪತ್ರವನ್ನು ಮಧುಗಿರಿಯ ತಹಶೀಲ್ದಾರ್ ಕಛೇರಿಯ ಬಳಿ ಬರೆದಿರುತ್ತಾರೆ. ಛಾಪಾ ಕಾಗದ ಪ್ರತಿವಾದಿ ತಂದಿರುತ್ತಾರೆ. 200 ರೂ ಮುಖಬೆಲೆಯ ಎರಡು ಛಾಪಾ ಕಾಗದಗಳನ್ನು ತಂದಿರುತ್ತಾರೆ. ಕಾರಾರು ಪತ್ರ ಬರೆಯುವಾಗ ನಾನು, ವಾದಿ, ಪ್ರತಿವಾದಿ, ರಂಗಾರೆಡ್ಡಿ ಮತ್ತು ಪತ್ರ ಬರಹಗಾರರು ಮಾತ್ರ ಹಾಜರಿದ್ದೇವು. ಛಾಪಾ ಕಾಗದವನ್ನು ಯಾವ ಸಮಯಕ್ಕೆ ತಂದಿರುತ್ತಾರೆ ಎಂದು ನೆನಪಿಲ್ಲ. ಕರಾರು ಪತ್ರವನ್ನು ಯಾವ ಸಮಯದಲ್ಲಿ ಬರೆದಿರುತ್ತಾರೆ ಎಂದು ನೆನಪಿರುವುದಿಲ್ಲ. ಕರಾರು

ಪತ್ರಕ್ಕೆ ನಾನು ಯಾವ ಸಮಯಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ ಕರಾರು ಪತ್ರಕ್ಕೆ ವಾದಿ, ಪ್ರತಿವಾದಿ, ನಾನು ಮತ್ತು ರಂಗಾರೆಡ್ಡಿ ಸಹಿ ಮಾಡಿರುತ್ತೇವೆ. ವಾದಿ ಮತ್ತು ಪ್ರತಿವಾದಿ ನಾಲ್ಕು ಪುಟಗಳಲ್ಲಿ ಸಹಿ ಮಾಡಿರುತ್ತಾರೆ.

3. ನನ್ನ ಸಮಕ್ಷಮ ರೂ. 2 ಲಕ್ಷ 10 ಸಾವಿರ ನಗದು ಪಾವತಿಸಿರುತ್ತಾರೆ. ಅವುಗಳಲ್ಲಿ 1000 ರೂ ಮುಖ ಬೆಲೆಯ ಎರಡು ಕಂತೆ ಮತ್ತು ಚಿಲ್ಲರೆ ಹಣ ನೀಡಿರುತ್ತಾರೆ. ನಾನು ವಾದಿ ಮತ್ತು ರಂಗಾರೆಡ್ಡಿ ಶಾಮಿಲ್ ಆಗಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಾನು, ವಾದಿ ಮತ್ತು ರಂಗಾರೆಡ್ಡಿ ಒಟ್ಟಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇವೆ ಎಂದು ಸೂಚಿಸುವುದು ಸರಿಯಮಲ್ಲ. ಸಾಕ್ಷಿ ಮುಂದುವರೆದು ನಾನು ಮಾತ್ರ ವ್ಯವಸಾಯದೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. ವಾದಿಯು ಸಹ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿಸಿರುವಂತೆ ಪ್ರತಿವಾದಿ ನನ್ನ ಸಮಕ್ಷಮ ಹಣ ಪಡೆದುಕೊಂಡು ವಾದಿಗೆ ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ವಾದಿಯ ಹೇಳಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ